## ದಿನಾಂಕ: 01-12-2018 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಾರ್ಡ್ ಸಂಖ್ಯೆ: 144, (ಸಿದ್ದಾಪುರ)** **ಸಮಯ: ಬೆಳ್ಳಿಗೆ 11:30 ಘಂಟೆಗಳು**

**ಹಾಜರಿದ್ದ ಪಾಲಿಕೆ ಅಧಿಕಾರಿಗಳು:-**

| | | |
|---|---|---|
| 01 | ಶ್ರೀ. ಆರ್. ಗಂಗಾಧರ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ ಚಿಕ್ಕಪೇಟೆ) ವಿಭಾಗ |
| 02 | ಶ್ರೀ. ಅಶೋಕ್ ಕುಮಾರ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬೆಸ್ಕಾಂ ಎಸ್-1 ಉಪ ವಿಭಾಗ) |
| 03 | ಶ್ರೀ. ಆರ್. ಕೊಟ್ರೇಶ್ ನಾಯಕ್ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 144, ಕಾರ್ಯದರ್ಶಿ ಮತ್ತು ಸಂಚಾಲಕರು. |
| 04 | ಶ್ರೀ. ಲೊಕೇಶ್ | ಸಹಾಯಕ ಅಭಿಯಂತರರು (ಬೆಸ್ಕಾಂ ಎಸ್-2 ಉಪ ವಿಭಾಗ) |
| 05 | ಶ್ರೀ. ಶ್ರೀನಿವಾಸ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 06 | ಶ್ರೀ. ಸೋಮಶೇಖರ್ | ಕೆಲಸ ಪರಿವೀಕ್ಷಕರು (ಬೆಂ.ನೀ.ಸ ಮತ್ತು ಒಳಚರಂಡಿ ಮಂಡಳಿ) |
| 07 | ಶ್ರೀಮತಿ. ಪೂನಂ. ಬ. ದೇಶನ್ನವರ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 08 | ಶ್ರೀ. ವೇಲು.ಎ | ಹಿರಿಯ ಆರೋಗ್ಯ ಪರಿವೀಕ್ಷಕರು |
| | | |

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-**

| | | |
|---|---|---|
| 01 | ಶ್ರೀ. ಮುಜಾಹಿದ್ ಪಾಷ. ಎ | ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನಗರ ಪಾಲಿಕೆ ಸದಸ್ಯರು (ವಾರ್ಡ್ ಸಂಖ್ಯೆ: 144, ಸಿದ್ದಾಪುರ) |
| 02 | ಶ್ರೀಮತಿ. ಮರಗತವಳ್ಳಿ | ಸದಸ್ಯರು |
| 03 | ಶ್ರೀ. ಆರ್. ಪವನ್ | ಸದಸ್ಯರು |
| 04 | ಶ್ರೀಮತಿ. ಡಾ. ಹಜೀರಾ ತರನುಮ್ | ಸದಸ್ಯರು |
| 05 | ಶ್ರೀ. ಸೈಯದ್ ಖಾಜಾ ನಿಜಾಮುದ್ಧೀನ್ | ಸದಸ್ಯರು |
| 06 | ಶ್ರೀ. ಸಾದಿಖ್ ಪಾಷಾ | ಸದಸ್ಯರು |
| 07 | ಶ್ರೀ. ಮಲ್ಲಿಕಾರ್ಜುನಯ್ಯ | ಸದಸ್ಯರು |
| 08 | ಶ್ರೀ. ಮುಜಾಯಿದ್ ಅಹಮದ್ ಖಾನ್ | ಸದಸ್ಯರು |
| 09 | ಶ್ರೀಮತಿ. ನಜೀಮಾ ಖಾನುಮ್ | ಸದಸ್ಯರು |
| 10 | ಶ್ರೀ. ಆನೀಸ್ ಖಾನ್ | ಸದಸ್ಯರು |

- ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ: 144 ರ ನಗರ ಪಾಲಿಕೆ ಸದಸ್ಯರಾದ ಶ್ರೀ. ಮುಜಾಯಿದ್ ಪಾಷ. ಎ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಹಾಗೂ ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

- ಸದರಿ ವಿಷಯವಾಗಿ ನಗರ ಪಾಲಿಕೆ ಸದಸ್ಯರಾದ ಶ್ರೀ. ಮುಜಾಯಿದ್ ಪಾಷ. ಎ ರವರು ತಿಂಗಳ ಮೊದಲ ಶನಿವಾರದಂದು ವಾರ್ಡ್ ಸಮಿತಿಯ ಸಭೆ ನಿಗದಿಯಾಗಿದ್ದು, ಸಾರ್ವಜನಿಕರು ಎಲ್ಲರೂ ಸಹಾ ಭಾಗವಹಿಸಲು ಕೋರಿರುತ್ತಾರೆ.

- ಶ್ರೀಮತಿ. ಮರಗತವಳ್ಳಿ, ವಾರ್ಡ್ ಸಮಿತಿ ಸದಸ್ಯರು ರವರು ತಮ್ಮ ಮನೆಯ ಹತ್ತಿರ ಮನೆ ಮನೆಯಿಂದ ಕಸ ಸಂಗ್ರಹಿಸಲು ಹಾಗೂ ಮನೆಯ ಹತ್ತಿರ ಇರುವ ಕಸ ಸಂಗ್ರಹಣೆಯಾಗುತ್ತಿರುವ ಜಾಗವನ್ನು ಸ್ವಚ್ಚಗೊಳಿಸಿ ಸುಂದರಿಕರಣಗೊಳಿಸಿಕೊಡಲು ಕೋರಿರುತ್ತಾರೆ. (ಘನತ್ಯಾಜ್ಯ ನಿರ್ವಹಣೆ, ಚಿಕ್ಕಪೇಟೆ ವಿಭಾಗ ರವರಿಗೆ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ).

- ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ವಾರ್ಡ್ ವ್ಯಾಪ್ತಿಯಲ್ಲಿ ಕಾಮಗಾರಿ ಪ್ರಾರಂಭಿಸುವ ಮೊದಲು ಬಿ.ಬಿ.ಎಂ.ಪಿ ಯ ಕಾಮಗಾರಿ ಇಲಾಖೆಯಿಂದ ಅನುಮತಿ ಪಡೆಯಲು ಸೂಚಿಸಿರುತ್ತಾರೆ ಹಾಗೂ ಎರಡು ಇಲಾಖೆಯವರು ಸಾರ್ವಜನಿಕರಿಗೆ ತೊಂದರೆಯಾಗದೇ ಸಹಮತದೊಂದಿಗೆ ಕಾರ್ಯನಿರ್ವಹಿಸಲು ಸೂಚಿಸಿರುತ್ತಾರೆ.

- ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಗಳು ಸಭೆಗೆ ಆಗಮಿಸಿದ್ದು, ತಮ್ಮದೇ ಆದ ಕಛೇರಿ ಕಟ್ಟಡವನ್ನು ಒದಗಿಸಲು ನಗರ ಸಭಾ ಸದಸ್ಯರನ್ನು ಕೋರಿಕೊಂಡಿರುತ್ತಾರೆ.

- ಬೀದಿ ದೀಪದ ನಿರ್ವಹಣೆಗೆ ಸಹಾಯಕ ಅಭಿಯಂತರರಾದ ಶ್ರೀ. ಶ್ರೀನಿವಾಸ್ ರವರಿಗೆ ಸಮರ್ಪಕವಾಗಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ತಿಳಿಸಿರುತ್ತಾರೆ.

- ಸೋಮೇಶ್ವರನಗರ ಮುಖ್ಯರಸ್ತೆ ಹಾಗೂ 10ನೇ "ಸಿ" ಮುಖ್ಯರಸ್ತೆಯಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ರವರು ಅಗೆದಿರುವ ರಸ್ತೆಯ ಭಾಗವು ಗುಂಡಿಗಳಾಗಿ ಮಾರ್ಪಟ್ಟಿದ್ದು, ಕೂಡಲೇ ಸದರಿ ಗುಂಡಿಗಳನ್ನು ಮುಚ್ಚಲು ಸೂಚಿಸಲಾಗಿದೆ ಹಾಗೂ ರಸ್ತೆ ಅಗೆಯುವ ಮುನ್ನ ಪಾಲಿಕೆ ವತಿಯಿಂದ ಅನುಮತಿ ಪಡೆದು ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

- ಮೇಲ್ಕಂಡ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ. ಮುಜಾಹಿದ್ ಪಾಷ. ಎ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಂಚಾಲಕರು

ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್ ಸಂಖ್ಯೆ: 144, (ಸಿದ್ದಾಪುರ)